# ಲಂಕಾವಿ

## ದ್ವೀಪದಿಂದ ಆಕಾಶದ ಅಂಗಳಕ್ಕೆ...



**ಮುಕ್ಕಾಲು ಭಾಗ ಕಾಡಿನಿಂದ ತುಂಬಿರುವ ಲಂಕಾವಿ, ಮಲೇಷ್ಯಾದಲ್ಲಿನ ಸುಂದರ ದ್ವೀಪ ಸಮೂಹ. ಗಿರಿಕಂದರಗಳ ನಡುವಿನಿಂದ ಆಕಾಶಕ್ಕೆ ಲಗ್ಗೆ ಇಟ್ಟಂತೆ ಕಾಣುವ ಇಲ್ಲಿನ 'ಸ್ಕೈ ಬ್ರಿಜ್' ರೋಮಾಂಚನಕಾರಿ ಅನುಭವ ನೀಡುತ್ತದೆ.**

■ ಅರ್ಕೆ ಆಡುಕಳ

ಮಲೇಷ್ಯಾಗೆ ಪ್ರವಾಸ ಹೋಗಲು ಯೋಚಿಸುತ್ತಿದ್ದ ನಮಗೆ ನೆನಪಿಗೆ ಬಂದಿದ್ದು ಮಲೇಷ್ಯಾದಲ್ಲಿನ ಲಂಕಾವಿ ಎಂಬ ಒಂದು ಪುಟ್ಟ ದ್ವೀಪ. ಇಲ್ಲಿಯ ಕೇಬಲ್ ಕಾರ್ ಮತ್ತು ಸ್ಕೈ ಬ್ರಿಜ್ ಬಗ್ಗೆ ತುಂಬಾ ಕೇಳಿದ್ದ ನಾವು, ನಮ್ಮ ಪ್ರವಾಸದ ಪಟ್ಟಿಯಲ್ಲಿ ಆ ಸ್ಥಳವನ್ನೂ ಸೇರಿಸಿಕೊಂಡೆವು.

ಲಂಕಾವಿ 99 ದ್ವೀಪಗಳ ಸಮೂಹ. ಲಂಕಾವಿಯನ್ನು ಬಿಟ್ಟರೆ ಇನ್ನೂ ಮೂರು ದ್ವೀಪಗಳಲ್ಲಿ ಜನವಸತಿಯಿದೆ. ಎಲ್ಲ ಸೇರಿ ಸುಮಾರು ಒಂದು ಲಕ್ಷ ಜನಸಂಖ್ಯೆ. 25 ಕಿ.ಮೀ. ಉದ್ದಗಲ ಹರಡಿ, ಮುಕ್ಕಾಲು ಭಾಗ ಕಾಡುಗಳಿಂದಲೇ ತುಂಬಿರುವ ಇದೊಂದು ಸುಂದರ ದ್ವೀಪ.

ವಾಯುಮಾರ್ಗ ಅಥವಾ ಜಲಮಾರ್ಗದ ಮೂಲಕ ಈ ದ್ವೀಪವನ್ನು ತಲುಪಬಹುದು. ಸಿಂಗಪುರದಿಂದ ಬರೀ ಒಂದು ತಾಸಿನ ವಿಮಾನ ಯಾನ. ಇಲ್ಲಿ ವಿಮಾನಗಳ ಹಾರಾಟ ಕಡಿಮೆಯಿರುವುದರಿಂದ, ಇದೊಂದು ಚಿಕ್ಕ ವಿಮಾನ ನಿಲ್ದಾಣ. ಬಂದಿಳಿಯುತ್ತಿದ್ದಂತೆ ನಮಗೊಂದು ಖುಷಿ ವಿಷಯ ಕಾದಿತ್ತು. ಇಲ್ಲಿ ಕಾರುಗಳನ್ನು ಬಾಡಿಗೆಗೆ ಪಡೆದು ನಾವೇ ಓಡಿಸಬಹುದು. ನಮಗೆ ಸ್ವಲ್ಪ ಅಧೈರ್ಯವಿದ್ದರೂ 'ಇದೊಂದು ಚಿಕ್ಕ ದ್ವೀಪ, ಇಲ್ಲೇನಾದರೂ ಕಳೆದುಹೋದರೆ ಅದು ನೀವೇ ಮೊದಲಿನವರು' ಎಂದು ನಗುತ್ತಲೇ ಅವರು ಧೈರ್ಯ ತುಂಬಿದರು. ಹೊರದೇಶದಲ್ಲಿ ಕಾರು ಓಡಿಸುವ ಅವಕಾಶದ ಖುಷಿಯಲ್ಲಿರುವಾಗಲೇ ಕಾರು ಬಂದು ನಿಂತಾಗಿತ್ತು.

ಲಗೇಜನ್ನು ತುಂಬಿ ಮೊದಲು ಹೊರಟಿದ್ದು ಹೋಟೆಲಿಗೆ. ಗೂಗಲ್ ಮ್ಯಾಪ್ ಇರುವುದರಿಂದ ನಮ್ಮ ಮಾರ್ಗವೂ ಸುಲಭವಾಗಿತ್ತು. ಈ ದ್ವೀಪದ ಮುಖ್ಯ ಆಕರ್ಷಣೆ, ಕೇಬಲ್ ಕಾರ್, ಸ್ಕೈ ಬ್ರಿಜ್, ಈಗಲ್ ಸ್ಕ್ವೇರ್, ಅಂಡರ್ ವಾಟರ್ ವರ್ಲ್ಡ್, ತಂಜುಂಗ್ ರು ಬೀಚ್, ಬೋಟಿನಲ್ಲಿ ಹೋಗೇ ನೋಡಬೇಕಾದ ಕ್ರೊಕೊಡೈಲ್ ಪಾರ್ಕ್, ಬ್ಯಾಟ್ ಕೇವ್, ಈಗಲ್ ಪ್ಯಾರಡೈಸ್, ವೈಲ್ಡ್ ಲೈಫ್ ಪಾರ್ಕ್ ಇತ್ಯಾದಿ. ಇಲ್ಲಿಗೆ ನಾವು ಎರಡು ದಿನದ ಯೋಜನೆ ಹಾಕಿಕೊಂಡು ಹೋಗಿದ್ದರಿಂದ, ಇಲ್ಲಿಯ ಪ್ರಮುಖ ಜಾಗಗಳನ್ನು ಮಾತ್ರ ನೋಡಲು ತೀರ್ಮಾನಿಸಿದ್ದೆವು. ಈಗಲ್ ಸ್ಕ್ವೇರ್ ನಾವು ಉಳಿದಿದ್ದ ಹೋಟೆಲಿನಿಂದ ಕಾಣಿಸುತ್ತಿದ್ದುದರಿಂದ ಊಟ ಮುಗಿಸಿದವರೇ ಅಲ್ಲಿಗೆ ಹೋದೆವು.

ಮಲಯ ಭಾಷೆಯಲ್ಲಿ 'ಹೆಲಾಂಗ್' ಅಂದರೆ ಹದ್ದು ಮತ್ತು 'ಕಾವಿ' ಎಂದರೆ (ಹಕ್ಕಿಯ ಕೆಂಪು–ಕಂದು ಛಾಯೆ). ಇವೆರಡರಿಂದ ಆಯ್ದ ಪದವೇ ಲಂಕಾವಿ (Langkawi). ಈಗಲ್ ಸ್ಕ್ವೇರ್‌ನಲ್ಲಿ ಸುಮಾರು 12 ಮೀಟರ್ ಎತ್ತರದ ಗರುಡನ ಸುಂದರವಾದ ಮೂರ್ತಿಯಿದೆ. ಇದೊಂದು ಅದ್ಭುತ ಜಾಗ. ಬ್ರಾಹ್ಮಿನಿ ಕೈಟ್ ಹದ್ದುಗಳು ಇಲ್ಲಿನ ಮೂಲ ನಿವಾಸಿಗಳಾಗಿದ್ದು, ಗರುಡ ಈ ದ್ವೀಪದ ಸಂಕೇತ ಕೂಡ ಆಗಿದೆ.

ನಮಗಿಲ್ಲಿಯ ಕಡಲದಂಡೆಯನ್ನು ನೋಡಲೇಬೇಕಿತ್ತು. ಹಾಗಾಗಿ ನಮ್ಮ ಮುಂದಿನ ಸವಾರಿ ಹೊರಟಿದ್ದು ತಂಜುಗ್ ರು ಬೀಚಿನೆಡೆಗೆ. ಈಗಲ್ ಸ್ಕ್ವೇರ್‌ನಿಂದ ಸುಮಾರು 20 ಕಿ.ಮೀ ರಸ್ತೆ. ಇದೊಂದು ಅತಿ ಸುಂದರ ಮತ್ತು ಸ್ವಚ್ಛವಾದ ಬೀಚು. ಇಲ್ಲಿ ಬೇರೆ ಬೇರೆ ವಿಧದ ಸಮುದ್ರಜೀವಿಗಳು ನೋಡಲು ಸಿಗುತ್ತವೆ. ಜೆಲ್ಲಿ ಫಿಶ್, ಸ್ಟಾರ್ ಫಿಶ್, ಸೀ ಪ್ಯಾನ್ಸಿ, ಇತ್ಯಾದಿ. ಒಂದಂತೂ ಕೋಲಿನಿಂದ ಮುಟ್ಟಿದಾಗ ಎಲೆಕ್ಟ್ರಿಕ್ ಸ್ಪಾರ್ಕ್ ಕೊಡುತ್ತಿತ್ತು. ಹಾಗಾಗಿ ನೀರಿಗಿಳಿದು ಈಜಲು ಯಾರೂ ಧೈರ್ಯ ಮಾಡಲಿಲ್ಲ. ಸಂಜೆ ತನಕ ಬೀಚಿನಲ್ಲೇ ಕಳೆದ ನಾವು ರಾತ್ರಿಯಾಗುತ್ತಿದಂತೆ ವಾಪಸಾದೆವು.

ಕುವಾ ಇಲ್ಲಿನ ಪ್ರಮುಖ ನಗರ. ಸಂಜೆ 8 ಗಂಟೆಗೆಲ್ಲ ನಗರದ ಹೆಚ್ಚಿನ ಶಾಪಿಂಗ್ ಮಾಲ್‌ಗಳು ಮುಚ್ಚಿದ್ದವು. ಇಲ್ಲಿ



ಲಂಕಾವಿಯಲ್ಲಿನ ಆಸಕ್ತಿದಾಯಕ ಸ್ಥಳ 'ಬ್ಯಾಟ್ ಕೇವ್'